2. ಖಾಸಗಿ ಬಿತ್ತನೆ ಮೊಟ್ಟೆ ತಯಾರಕರು ಗಂಟು ರೋಗ ರಹಿತ ಮೊಟ್ಟೆಯನ್ನು ತಯಾರಿಸುವಂತೆ ಇಲಾಖೆ ತೀವ್ರ ಕ್ರಮ ಕೈಗೊಂಡಿದೆ.

ರೇಷ್ಮೆ ಹುಳುಗಳ ತಳಿಗಳ ವಿವರ

1146 (679): ಶ್ರೀ ವೈ.ಕೆ. ರಾಮಯ್ಯ (ಕುಣಿಗಲ್):–

ಮಾನ್ಯ ರೇಷ್ಮೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರೇಷ್ಮೆ ಹುಳುಗಳ ತಳಿಗಳು ಯಾವುವು;

ಆ) ಈ ತಳಿಗಳು ಉತ್ತಮ ಬೆಳೆ ಕೊಡಲು ಅನುಕೂಲವಾಗಿವೆಯೇ;

ಇ) ಇತ್ತೀಚಿನ ವರ್ಷಗಳಲ್ಲಿ ಯಾವುದಾದರೂ ಹೊಸ ತಳಿಗಳನ್ನು ಪರಿಷ್ಕರಿಸಲಾಗಿದೆಯೇ;

ಈ) ಹಾಗಿದ್ದಲ್ಲಿ ಆ ತಳಿಗಳ ಹೆಸರೇನು;

ಉ) ಇಲ್ಲದಿದ್ದಲ್ಲಿ ಅದಕ್ಕೆ ಕಾರಣವೇನು ?

ಡಾ. ಜಿ. ಪರಮೇಶ್ವರ (ರೇಷ್ಮೆ ರಾಜ್ಯ ಸಚಿವರು):–

ಅ) ಮೈಸೂರು ತಳಿ, ಕೆಎ, ಎನ್‌ಬಿ 4 ಡಿ 2; ಎನ್‌ಬಿ 7; ಎನ್‌ಬಿ 18 ಮತ್ತು ಸಿನಿಜಿ

ಆ) ಅನುಕೂಲವಾಗಿವೆ.

ಇ) ಪರಿಷ್ಕರಿಸಲಾಗಿದೆ.

ಈ) ಸಿಸಿ 1, ಆರ್‌ಡಿ1 , ಎನ್‌ಪಿ ಮತ್ತು ಎಸ್‌ಪಿ;

ಉ) ಉದ್ಭವಿಸುವುದಿಲ್ಲ.

ಗ್ರಾಮೀಣ ಪ್ರದೇಶಗಳಲ್ಲಿ ಕಟ್ಟುತ್ತಿದ್ದ ಹುಡ್ಕೋ ಮನೆಗಳಿಗೆ ಹಣ ಬಿಡುಗಡೆ

1147 (255): ಶ್ರೀ ಮಾಧುಸ್ವಾಮಿ ಜೆ.ಸಿ. (ಚಿಕ್ಕನಾಯಕನಹಳ್ಳಿ):–

ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಗ್ರಾಮೀಣ ಪ್ರದೇಶದಲ್ಲಿ ಬಡವರಿಗಾಗಿ ನಿರ್ಮಿಸುತ್ತಿದ್ದ ಜನತಾ ಹುಡ್ಕೋ ಮನೆಗಳ ನಿರ್ಮಾಣ ಕೆಲಸವನ್ನು ನಿಲುಗಡೆಗೆ ತಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಆಶ್ರಯ ಯೋಜನೆ ಬರುವ ಮೊದಲೇ ಅವುಗಳಿಗೆ ಹಣ ಬಿಡುಗಡೆ ಮಾಡುವುದು ಕರ್ತವ್ಯವಲ್ಲವೆ;

ಇ) ಹಾಗಿದ್ದಲ್ಲಿ 89-90, 90-91, 91-92 ರಲ್ಲಿ ಮನೆಯನ್ನು ಕಟ್ಟಲು ಕಾರ್ಯಾದೇಶ ಪಡೆದು ಮನೆ ಕೆಲಸ ಆರಂಭಿಸಿದವರಿಗೆ ಹಣ ಮಂಜೂರು ಮಾಡಲಾಗುವುದೇ;

ಈ) ಈವರೆಗೆ ಸದರಿ ಯೋಜನೆಗಳ ಅಡಿಯಲ್ಲಿ ಬಿಡುಗಡೆಯಾಗಿರುವ ಹಣವೆಷ್ಟು ಹಾಗೂ ಬಾಕಿ ಎಷ್ಟು ?

ಶ್ರೀ ಗೋಪಿನಾಥ ಆರ್. ಸಾಂದ್ರ (ವಸತಿ ಸಚಿವರು):–

ಆ) ಇಲ್ಲ. ಆದರೆ ಈ ಯೋಜನೆಯಲ್ಲಿಯ ಮನೆಗಳು ಪ್ರಗತಿಯ ಹಂತದಲ್ಲಿದ್ದು, ಪ್ರಸ್ತುತ ಸಾಲಿನಲ್ಲಿ ಡಿಸೆಂಬರ್ ಅಂತ್ಯದವರೆಗೆ 13,235 ಮನೆಗಳು ಪೂರ್ಣಗೊಂಡಿವೆ.

ಇ) ಹೌದು.

ಈ) 1989-90ನೇ ಸಾಲಿನ ಮನೆಗಳಿಗೆ ಆದೇಶ ನೀಡಿದೆ. 90-91ರಲ್ಲಿ ಮಂಜೂರಾದ ಮನೆಗಳಿಗೆ ಹುಡ್ಕೋ ಸಾಲ ಬರದಿದ್ದರಿಂದ ಅವುಗಳನ್ನು 91-92ರ ಆಶ್ರಯ ಯೋಜನೆಯಡಿಯಲ್ಲಿ ವಿಲೀನಗೊಳಿಸಲಾಗಿದೆ. ಆದಾಗ್ಯೂ ಸರ್ಕಾರ ಬಿಡುಗಡೆ ಮಾಡಿದ ಸಹಾಯಧನವನ್ನಾಧರಿಸಿ 10 ಜಿಲ್ಲೆಗಳ 4758 ಮನೆಗಳ ಕಾರ್ಯವನ್ನು ಪ್ರಾರಂಭಿಸಿ ಅದರಲ್ಲಿ 1416 ಮನೆಗಳನ್ನು ಪೂರ್ಣಗೊಳಿಸಿದ್ದಾರೆ. ಉಳಿದ ಜಿಲ್ಲೆಗಳಲ್ಲಿ 1990-91ನೇ ಸಾಲಿನ ಮನೆಗಳ ಕೆಲಸ ಕೈಗೊಂಡಿಲ್ಲ. ಮನೆಗಳ ಪ್ರಗತಿಯನ್ನಾಧರಿಸಿ ಹುಡ್ಕೋ ಸಾಲದ ಕಂತನ್ನು ಬಿಡುಗಡೆ ಮಾಡುತ್ತಿದೆ.

ಈ) ಈವರೆಗೆ ಯೋಜನೆಗೆ 1989-90ನೇ ಸಾಲಿಗೆ 638.85 ಲಕ್ಷ ರೂ. ಸಾಲದ ಕಂತು ಬಿಡುಗಡೆ ಮಾಡಿದ್ದು ಇನ್ನು 1286.55 ಲಕ್ಷ ರೂ.ಗಳನ್ನು ಪ್ರಗತಿಯನ್ನಾಧರಿಸಿ ಬಿಡುಗಡೆ ಮಾಡಲಾಗುತ್ತದೆ. ಈ ಸಾಲಿಗೆ ಸಹಾಯಧನ ಬಾಕಿ ಇಲ್ಲ.

ಎಸ್.ಸಿ.ಪಿ. ಯೋಜನೆಯಡಿಯಲ್ಲಿ ಸ್ವೀಕರಿಸಲಾದ ಅರ್ಜಿಗಳ ಸಂಖ್ಯೆ

1149 (533): ಶ್ರೀ ಅಂಜನಮೂರ್ತಿ (ನೆಲಮಂಗಲ):–

ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಅದರಲ್ಲೂ ಮುಖ್ಯವಾಗಿ ನೆಲಮಂಗಲ ತಾಲ್ಲೂಕಿನಲ್ಲಿ ಕೊಳವೆ ಬಾವಿ ಕೊರೆಸಲು ಎಸ್.ಸಿ.ಪಿ. ಯೋಜನೆಯಡಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮದವರು ಕಳೆದ ಮೂರು ವರ್ಷಗಳಿಂದ ಸ್ವೀಕರಿಸಲಾದ ಅರ್ಜಿಗಳೆಷ್ಟು; (ತಾಲ್ಲೂಕುವಾರು ವಿವರಗಳನ್ನು ನೀಡುವುದು);

ಆ) ಆ ಪೈಕಿ, ಮಂಜೂರು ಮಾಡಲಾಗಿರುವ ಅರ್ಜಿಗಳಾವುವು; (ವಿವರಗಳನ್ನು ಒದಗಿಸುವುದು)

ಇ) ಕೊಳವೆ ಬಾವಿ ಬಿಂದುವನ್ನು ಗುರುತಿಸುವಲ್ಲಿ ಭೂಗರ್ಭ ತಜ್ಞರಿಂದ ಅವ್ಯವಹಾರಗಳು ನಡೆಯುತ್ತಿರುವ ಸಂಬಂಧದಲ್ಲಿ ದೂರುಗಳೇನಾದರೂ ಬಂದಿದೆಯೇ;

ಈ) ಹಾಗಿದ್ದಲ್ಲಿ, ಸರ್ಕಾರದವರು ಆ ಬಗ್ಗೆ ಕೈಗೊಂಡ ಕ್ರಮಗಳೇನು ?

ಶ್ರೀ ಧರ್ಮಸಿಂಗ್ (ಸಮಾಜ ಕಲ್ಯಾಣ ಸಚಿವರು):–

ಅ) ಇಡೀ ರಾಜ್ಯದಲ್ಲಿ ಸ್ವೀಕರಿಸಲಾದ ಅರ್ಜಿಗಳ ಸಂಖ್ಯೆ 15,473.
ನೆಲಮಂಗಲ ತಾಲ್ಲೂಕಿನಲ್ಲಿ ಸ್ವೀಕರಿಸಲಾದ ಅರ್ಜಿಗಳ ಸಂಖ್ಯೆ 264
ತಾಲ್ಲೂಕುವಾರು ವಿವರ ಅನುಬಂಧದಲ್ಲಿ ಕೊಡಲಾಗಿದೆ.

ಆ) ವಿವರಗಳನ್ನು ಅನುಬಂಧದಲ್ಲಿ ಕೊಡಲಾಗಿದೆ.

ಇ) ಹೌದು, ಒಬ್ಬ ಭೂ ಗರ್ಭ ತಜ್ಞರ ಮೇಲೆ ದಿನಾಂಕ : 19-2-92ರಂದು ದೂರು ಬಂದಿದೆ.

ಈ) ಈ ದೂರನ್ನು (ಬಾವಿ ಕೊರೆಯುವ ಆಗಿನ ಗುತ್ತಿಗೆದಾರರಾಗಿದ್ದ) ಕರ್ನಾಟಕ ಕೃಷಿ ಕೈಗಾರಿಕಾ